ಆ) ಈ ಮಾಹಿತಿಯು ಸಿಗುತ್ತಿಲ್ಲ.

ಇ) ಈ ವರ್ಷ ದುರಸ್ತಿ ಕಾರ್ಯವನ್ನು ಹಣಕಾಸಿನ ಪರಿಸ್ಥಿತಿಯನ್ನು ಸರಿಸಿ ಕೈಗೊಳ್ಳಲಾಗುವುದು.

ಶ್ರೀ ಕೆ. ರಾಮಭಟ್.—ಸ್ವಾಮಿ, ಬಂಟವಾಳ ತಾಲ್ಲೂಕಿನ ಅವ್ಯವಸ್ಥೆ ಮತ್ತು ಮಾಣಿ ಹಾಗೂ ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಸಾರ್ವಜನಿಕ ಆಸ್ಪತ್ರೆ ಕಟ್ಟಡಗಳು ಅತಿ ಜರೂರಾಗಿ ರಿಪೇರಿಯಾಗ ಬೇಕಾಗಿದೆ. ರಿಪೇರಿ ಮಾಡದಿದ್ದರೆ ಪ್ರಾಣ ಹಾನಿಯಾಗುತ್ತದೆ. ಹಣದ ವ್ಯವಸ್ಥೆಯನ್ನು ಮಾಡಿ, ಈ ವರ್ಷವೇ ರಿಪೇರಿ ಕಾರ್ಯ ಮಾಡಿಸುತ್ತೀರಾ ?

ಶ್ರೀ ಪಿ ಜಿ. ಆರ್. ಸಿಂಧ್ಯ.—ಮಾಡಿಸುತ್ತೇನೆ.

ರಾಜ್ಯದಲ್ಲಿ ನೌಕರರ ರಾಜ್ಯ ವಿಮಾ ಯೋಜನೆಗಳನ್ನು ಜಾರಿ ಗೊಳಿಸುವುದು

೭೧೫. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ) —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಯಾವ ಯಾವ ನಗರ ಮತ್ತು ಪ್ರದೇಶಗಳಲ್ಲಿ ಇ. ಎಸ್. ಐ. ಯೋಜನೆಯನು ಜಾರಿಗೆ ತರಲಾಗಿದೆ.;

ಆ) ಈ ಯೋಜನೆಯ ಪ್ರಕಾರ ಆಸ್ಪತ್ರೆಗಳನ್ನು ಎಲ್ಲೆಲ್ಲಿ ಕಟ್ಟಿಸಲಾಗಿದೆ, ಅವುಗಳು ವಿವರ ಗಳನ್ನು ತಿಳಿಸುವುದು.;

ಇ) ರಾಜ್ಯ ವಿಮಾ ಯೋಜನೆಯ ಪ್ರಾದೇಶಿಕ ಸಮಿತಿಯು ಈ ಯೋಜನೆಯನ್ನು ಜಾರಿಗೆ ತರಬೇಕೆಂದು ಶಿಫಾರಸ್ಸು ಮಾಡಿರುವ ಪ್ರದೇಶಗಳಾವುವು ಮತ್ತು ಅವುಗಳಲ್ಲಿ ಯಾವ ನಗರ ಅಥವಾ ಪ್ರದೇಶಗಳಲ್ಲಿ ಜಾರಿಗೆ ತಂದಿಲ್ಲ.;

ಈ) ಈ ರೀತಿ ಜಾರಿಗೆ ತರದಿದ್ದುದಕ್ಕೆ ಕಾರಣಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯಾ :—(ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು)

ಅ) ರಾಜ್ಯದ ಬೀದರ್ ಚಿಕ್ಕಮಂಗಳೂರು ಮತ್ತು ಕೊಡಗು ಜಿಲ್ಲೆಗಳ ಹೊರತು ಉಳಿದ ಎಲ್ಲಾ ಜಿಲ್ಲಾ ನಗರ ಮತ್ತು ಇತರ ಪ್ರದೇಶಗಳಲ್ಲಿ ಜಾರಿಗೆ ತರಲಾಗಿದೆ.

ಆ) ೧) ೫೦೦ ಹಾಸಿಗೆ ಸೌಲಭ್ಯದ ಇ. ಎಸ್. ಐ. ಆಸ್ಪತ್ರೆ, ಬೆಂಗಳೂರು
೨) ೬೦ ಹಾಸಿಗೆ ಸೌಲಭ್ಯದ ಇ. ಎಸ್. ಐ. ಆಸ್ಪತ್ರೆ, ಮಂಗಳೂರು.
೩) ೧೦೦ ಹಾಸಿಗೆ ಸೌಲಭ್ಯದ ಇ.ಎಸ್.ಐ. ಆಸ್ಪತ್ರೆ ಮೈಸೂರು
೪) ೨೫ ಹಾಸಿಗೆ ಸೌಲಭ್ಯದ ಇ. ಎಸ್. ಐ. ಆಸ್ಪತ್ರೆ, ದಾಂಡೇಲಿ

ಸರಕಾರಿ ಆಸ್ಪತ್ರೆಗಳಲ್ಲಿ ಈ ಯೋಜನೆಯ ವಿಭಾಗಗಳು ಕೆಳಗಿನ ಸ್ಥಳಗಳಲ್ಲಿವೆ .—

೧) ಎಸ್. ಡಿ. ಎಸ್.
ಸ್ಯಾನಿಟೋರಿಯಂ ೩೨ ಹಾಸಿಗೆಗಳು
೨) ಕೆ. ಜಿ. ಎಫ್. ೩೨ ಹಾಸಿಗೆಗಳು
೩) ಸರ್ಕಾರಿ ಆಸ್ಪತ್ರೆ,
ಗುಲ್ಬರ್ಗ ೨೦ ಹಾಸಿಗೆಗಳು

೧) ವಿವಿಧ ಹಂತದಲ್ಲಿರುವ ಇ.ಎಸ್.ಐ. ಆಸ್ಪತ್ರೆಗಳು—

೧) ೩೦೦ ಹಾಸಿಗೆ ಸೌಲಭ್ಯದ ಇ.ಎಸ್.ಐ. ಆಸ್ಪತ್ರೆ, ಇಂದಿರಾ ನಗರ ಬೆಂಗಳೂರು.

(ಕಟ್ಟಡದ ಕೆಲಸ ಮಾರ್ಚ್ ಅಳಕ್ಕೆ ಪೂರೈಸಿ ಇಲಾಖೆಗೆ ಕೊಡುವ ನಿರೀಕ್ಷೆ ಇದೆ)

೨) ೫೦ ಹಾಸಿಗೆ ಸೌಲಭ್ಯದ ಇ.ಎಸ್.ಐ. ಆಸ್ಪತ್ರೆ, ದಾವಣಗೆರೆ
೩) ೫೦ ಹಾಸಿಗೆ ಸೌಲಭ್ಯದ ಇ.ಎಸ್.ಐ. ಆಸ್ಪತ್ರೆ, ಹುಬ್ಬಳ್ಳಿ
೪) ೫೦ ಹಾಸಿಗೆ ಸೌಲಭ್ಯದ, ಇ.ಎಸ್.ಐ. ಆಸ್ಪತ್ರೆ ಬೆಳಗಾಂ
೫) ೫೦ ಹಾಸಿಗೆ ಸೌಲಭ್ಯದ ಇ. ಎಸ್ ಐ. ಆಸ್ಪತ್ರೆ ಮುರಡಿಮಠ,
೬) ೨೫ ಹಾಸಿಗೆ ಸೌಲಭ್ಯದ ಇ.ಎಸ್.ಐ. ಆಸ್ಪತ್ರೆ ಶಹಬಾದ್

ಇ) ಮುದ್ದೂರು ದಾವಣಗೆರೆ ಮೈಸೂರು
೧. ವಿನೋಬ ನಗರ ೧. ಮುಂಡಗಳ್ಳಿ
೨. ತೋಳಹುಣಸೆ ೨. ನಜರ್‌ಬಾದ್

ಇ.ಎಸ್.ಐ. ನಿಗಮದೊಡನೆ ವಿವರಗಳನ್ನು ಕೋಲಂಕುಷವಾಗಿ ಪರಿಶೀಲಿಸಲಾಗುತ್ತಿದೆ.

ಈ) ಇನ್ನೂ ಪರಿಶೀಲನೆಯ ಹಂತದಲ್ಲಿರುವುದರಿಂದ ಹೊರಿಗೆ ತರಲಾಗಲಿಲ್ಲ.

ಶ್ರೀ ಎಂ ಎಸ್. ಕೃಷ್ಣನ್.—೩೦೦ ಹಾಸಿಗೆ ಸೌಲಭ್ಯದ ಇ.ಎಸ್.ಐ. ಆಸ್ಪತ್ರೆ, ಬೆಂಗಳೂರಿನ ಇಂದಿರಾ ನಗರದಲ್ಲಿ ಯಾವಾಗ ಕಟ್ಟಡದ ಕೆಲಸ ಆರಂಭವಾಯಿತು ? ಯಾವಾಗ ಮುಕ್ತಾಯವಾಗ ಬೇಕಾಯಿತು ತಮಗೆ ಗೊತ್ತಿದೆಯೇ ಏತಕ್ಕೆ ಇಷ್ಟು ವಿಳಂಬವಾಗುತ್ತಿದೆಯೆಂದು ಹೇಳುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆದರ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ. ಪ್ರತ್ಯೇಕವಾಗಿ ನಾನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇ. ಎಸ್. ಐ. ಆಸ್ಪತ್ರೆ ಇಂದಿರಾನಗರದಲ್ಲಿ ೧೯೮೨–೮೩ರಲ್ಲಿ ಕಂಪ್ಲೀಟ್ ಆಗಬೇಕೆಂದು ತಿರ್ಮಾನವಾಗಿದ್ದು ಗೊತ್ತಿದೆಯೇ, ಆದು ೧೯೮೩–೮೪ಕ್ಕೆ ಆಗುತ್ತೀದೆಯೋ, ಇಲ್ಲವೋ ಎಂದು ಹೇಳಲಿಕ್ಕೆ ಆಗದೇ ಇರತಕ್ಕ ಗೊಂದಲಮಯ ಪರಿಸ್ಥಿತಿ ಬಂದಿರುವುದು ತಮಗೆ ಗೊತ್ತಿದೆಯೇ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇದು ಸರ್ಕಾರದ ಗಮನಕ್ಕೆ ಬಂದಿದೆ. ೧೯೮೪ರ ಮಾರ್ಚ್ ಹೊತ್ತಿಗೆ ಇದನ್ನು ಮುಗಿಸಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—೫೦ ಹಾಸಿಗೆ ಸೌಲಭ್ಯದ ಇ.ಎಸ್.ಐ. ಆಸ್ಪತ್ರೆ ವಿಚಾರದಲ್ಲಿ ಹೇಳುತ್ತಾ, ದಾವಣಗೆರೆ, ಹುಬ್ಬಳ್ಳಿ, ಬೆಳಗಾಂ, ಮುರಡಿಮಠ, ಶಹಬಾದಗಳು ವಿವಿಧ ಹಂತದಲ್ಲಿವೆ ಎಂದು ಹೇಳಿದ್ದೀರಿ, ಅಂದರೆ ಇವು ಯಾವ ಯಾವ ಹಂತದಲ್ಲಿವೆ ಎಂದು ತಿಳಿಸುತ್ತಿರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾಹಿತಿ ಇಲ್ಲ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಮಂತ್ರಿಗಳು ಶಹಬಾದ್ ವಿಚಾರದಲ್ಲಿ ೨೫ ಹಾಸಿಗೆ ಸೌಲಭ್ಯದ ವಿಚಾರ ಹೇಳಿದ್ದಾರೆ. ಆಲ್ಲಿ ಜಮೀನು ಅಕ್ವೈರ್ ಮಾಡಿಕೊಂಡಿಲ್ಲ, ಇ.ಎಸ್.ಐ. ಆಸ್ಪತ್ರೆಗೆ ಬಡ್ಜೆಟ್ ಸ್ಯಾಂಕ್ಷನ್ ಆಗಿದೆ. ಅಲ್ಲಿ ಜಮೀನು ಇಲ್ಲ, ಇದನ್ನು ಯಾವಾಗ ಕಟ್ಟುತ್ತಿರಿ ? ಇಂತಹ ವರ್ಷದಲ್ಲಿ ಕಟ್ಟುತ್ತೇವೆಂದು ಮಾನ್ಯ ಮಂತ್ರಿಗಳು ತಿಳಿಸುತ್ತೀರಾ ?

ಶ್ರೀ ಪಿ.ಜಿ. ಆರ್ ಸಿಂಧ್ಯ.—ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಹೊಸೂರು ರಸ್ತೆಯಲ್ಲಿ ಅನೇಕ ಕಾರ್ಖಾನೆಗಳು ಬಂದಿವೆ. ಹಲವಾರು ವರ್ಷಗಳಿಂದ ಅಲ್ಲಿ ಇಎಸ್‌ಐ ಯೋಜನೆ ಜಾರಿ ಇಲ್ಲ. ಅಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅಡ್ಡಿ ಆಂತಕ ಏನಿದೆ ತಿಳಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇ.ಎಸ್.ಐ. ಡೈರೆಕ್ಟರ್ ಕರೆದು ಇದರ ಬಗ್ಗೆ ಮಾತನಾಡಿದ್ದೇನೆ ಬೆಂಗಳೂರಿನಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಇದೆ, ಇವರ ಒಂದು ಕ್ರಮದ ಪ್ರಕಾರ ಈ ನಿಗಮ ದೊಡನೆ ಸೇರಿಸಲಿಕ್ಕೆ ಸಮಿತಿ ಇದೆ, ಆ ಸಮಿತಿಯವರು ಇತ್ತೀಚೆಗೆ ಸೇರಿದ್ದರು. ಮುತ್ತೆ ಸೇರಿ ಯಾವುದಂ ಯಾವುದು ಸೇರಿಸಬೇಕು ತಿಳಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.--ನಾಲ್ಕೈದು ವರ್ಷದಿಂದ ದೂರು ಕೊಡುತ್ತಿದ್ದೇನೆ. ಅವರು ಮೆಡಿಕಲ್ ಆಸ್ಪತ್ರೆಗೆ ಬರಬೇಕಾಗುತ್ತದೆ ಇದರಿಂದ ಅನೇಕ ಜನರಿಗೆ ತೊಂದರೆಯಾಗಿದೆ. ಇದನು ಎಷ್ಟು ದಿವಸದಲ್ಲಿ ಮಾಡುತ್ತೀರಾ ಮಂತ್ರಿಗಳು ತಿಳಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.--ಆದಷ್ಟು ಬೇಗ ಸೇರಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀಎಂ. ಎಸ್. ಕೃಷ್ಣನ್.--ಅಧ್ಯಕ್ಷರೆ, ನನ್ನ (೩) ಪ್ರಶ್ನೆಗೆ ಮಂದ್ರೂರು. ದಾವಣಗೆರೆ, ಮೈಸೂರು ಇಲ್ಲಿ ಪೂರ್ತಿ ಜಾರಿಗೆ ತಂದಿಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಅಮ್ಮಸಂದ್ರ ಮೈಸೂರು ಸಿಮೆಂಟ್, ಮತ್ತು ಬಂಗಳೂರು ಉತ್ತರ ತಾಲ್ಲೂಕು ಪ್ರದೇಶ, ನೆಲಮಂಗಲದಲ್ಲಿ ಇವೆಲ್ಲಾ ಕಡೆ ಇನ್ನೆ ನವ್ಮ ರಾಜ್ಯದ ಇಎಸ್‌ಐ ಒಂದು ಕಮಿಟಿ ಏನಿದೆ ಆ ಕಮಿಟಿಯವರು ಶಿಫಾರಸ್ಸು ಮಾಡಿ ವರ್ಷಾಂತರ ಗಳಾಗಿವೆ ಎನ್ನುವುದು ಗೊತ್ತಿದೆಯೇ, ಗೊತ್ತಿದ್ದರೂ ಪ್ರಶ್ನ : ಜಾರಿಗೆ ತೆಗೆದುಕೊಂಡು ಬಂದಿದೇ ಇರುವುದಕ್ಕೆ ಕಾರಣ ಏನು ? ಆದ್ದರಿಂದ ತಕ್ಷಣ ಕಾರ್ಯ ಕ್ರಮ ಜಾರಿಗೆ ತರಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಪಿ. ಜಿ. ಆರ್, ಸಿಂಧ್ಯ--ವಿಳಂಬವಾಗಿರುವುದು ನಿಜ. ಆದಷ್ಟು ಬೇಗ ಕಾರ್ಯಾಚರಣೆಗೆ ತರಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಹಾಗೂ ಬೌರಿಂಗ್ ಮತ್ತು ಲೇಡಿ ಕರ್ಜನ್, ಆಸ್ಪತ್ರೆಗಳಲ್ಲಿ ಅಸಪಂರ್ಪಕ ವೈದ್ಯ ಸೇವೆ ಮತ್ತು ಭ್ರಷ್ಟಾಚಾರಗಳ ಬಗ್ಗೆ.

೨೧೪. ಶ್ರೀ ಎಸ್. ಸೂರ್ಯ ನಾರಾಯಣರಾವ್ (ಪರ್ತೂರು)— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

(ಅ) ಬೆಂಗಳೂರು ನಗರದಲ್ಲಿರುವ ವಿಕ್ಟೋರಿಯ ಮತ್ತು ಬೌರಿಂಗ್ ಆಸ್ಪತ್ರೆಗಳಲ್ಲಿ ೧೯೮೭-೮೩ ರಲ್ಲಿ ಚಿಕಿತ್ಸೆ ಪಡೆದ ಹೊರ ಮತ್ತು ಒಳರೋಗಿಗಳ ಸಂಖ್ಯೆ ಎಷ್ಟು ?

(ಆ) ಈ ರೋಗಿಗಳಿಗಾಗಿ ವಿವಿಧ ಔಷಧಗಳಿಗಾಗಿ ಮಾಡಿದ ಹಣವೆಷ್ಟು?

(ಇ) ಈ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸರಿಯಾದ ಉಪಚಾರ ಸಿಗುತ್ತಿಲ್ಲವೆಂಬುದು ಮತ್ತು ಭ್ರಷ್ಟಾಚಾರ ವ್ಯಾಪಕವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

(ಈ) ಅಸಮರ್ಪಕ ವೈದ್ಯೋಪಚಾರ ಮತ್ತು ಭ್ರಷ್ಟಾಚಾರವನ್ನು ತೊಡೆದು ಹಾಕಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ಮತ್ತು ಇವುಗಳನ್ನು ಸರಕಾರವು ತೀವ್ರವಾಗಿ ಪರಿಗಣಿಸಿ ತಕ್ಷಣ ಮೂಲೋತ್ಪಾಟನ ಮಾಡುವುದೆಂಬ ಭರವಸೆ ಸರ್ಕಾರ ಕೊಡುವುದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

(ಅ) ವಿಕ್ಟೋರಿಯಾ ಆಸ್ಪತ್ರೆ ಬೌರಿಂಗ್ ಆಸ್ಪತ್ರೆ ಒಳರೋಗಿಗಳು ೨೪,೮೫೯ ೨೨,೧೫೨ ಹೊರ ರೋಗಿಗಳು ೪೬೮,೧೪೩ ೩,೦೨,೮೭೮

(ಆ) ೧೯೮೭ -೮೩ನೇ ಸಾಲಿನಲ್ಲಿ ಔಷಧೋಪಚಾರಗಳಿಗಾಗಿ ವಿಕ್ಟೋರಿಯಾ ಆಸ್ಪತ್ರೆಗಾಗಿ ಲಕ್ಷ ೨೦.೪೯ ರೂಪಾಯಿಗಳು ಮತ್ತು ಬೌರಿಂಗ್ ಆಸ್ಪತ್ರೆಗಾಗಿ ೧೬.೭೪ ಲಕ್ಷ ರೂ.ಗಳನ್ನು ಮೀಸ್ಲು ಮಾಡಲಾಗಿರುತ್ತದೆ

(ಇ) ಇಲ್ಲ.

(ಈ) ಯಾವುದೇ ನಿರ್ದಿಷ್ಟವಾದ ಭ್ರಷ್ಟಾಚಾರದ ಆಪಾದನೆಯು ಸರಕಾರದ ಗಮನಕ್ಕೆ ಬಂದ ಪಕ್ಷದಲ್ಲಿ ಆ ವ್ಯಕ್ತಿಯ ಮೇಲೆ ಕ್ರಮ ಕೈಕೊಳ್ಳಲಾಗುತ್ತದೆ. ಇದು ಸರಕಾರವು ಭ್ರಷ್ಟಾಚಾರವನ್ನು ನಿರ್ಮೂಲ ಮಾಡುವ ಉದ್ದೇಶದಿಂದ ಕೂಡಿರುತ್ತದೆ.